**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಆರ್.ಎ. ನಂ. 18/2022.**

**ಪಿ ಡಬ್ಲ್ಯೂ: 1**

**ದಿನಾಂಕಃ 18-07-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿ ನಂ 1 ರ ಮೇಲೆ ವಿಚಾರಣೆ.**

**ಪಾಟೀ ಸವಾಲುಃ ಶ್ರೀ ಜಿ.ಎಸ್.ಹೆಚ್. ವಕೀಲರಿಂದ:**

ಅಸಲು ದಾವಾಯಲ್ಲಿ ನಾನೇ ಸಾಕ್ಷ್ಯ ನುಡಿದಿದ್ದೆ ಎಂದರೆ ಸರಿ. ನಮ್ಮ ಗ್ರಾಮ ಬ್ಯಾಡಗಿಯಿಂದ 6 ಕೀ.ಮೀ ಅಂತರದಲ್ಲಿದೆ ಎಂದರೆ ಸರಿ. ನಾನು ಪ್ರತಿ ಶನಿವಾರ ಬ್ಯಾಡಗಿಗೆ ಬಂದು ಸಂತೆ ಮಾಡಿಕೊಂಡು ಹೋಗುತ್ತೇನೆ ಎಂದರೆ ಸರಿ. ಉಳಿದ ಮೇಲ್ಮನವಿದಾರರು ಅವರ ಪರ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಅವರ ಎಲ್ಲರ ಪರ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ. ಉಳಿದ ಮೇಲ್ಮನವಿದಾರರು ನನಗೆ ಅವರ ಪರ ಸಾಕ್ಷ್ಯ ನುಡಿಯಲು ಅಧಿಕಾರ ಪತ್ರ ಬರೆದುಕೊಡದೇ ಇದ್ದುದ್ದರಿಂದ ನನಗೆ ಅವರ ಪರ ಸಾಕ್ಷಿ ನುಡಿಯಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

2. ನಾನು ಪ್ರತಿವಾರ ಸಂತೆಗೆ ಬಂದಾಗ ನಮ್ಮ ವಕೀಲರನ್ನು ಬೇಟಿಯಾಗಿ ಮೇಲ್ಮನವಿ ದಾಖಲಿಸಲು ಸೂಚಿಸಬಹುದಿತ್ತು ಎಂದರೆ ಸಾಕ್ಷಿ ಒಂದು ವಾರ ಬರುತ್ತೇವೆ ಒಂದು ವಾರ ಬರುವುದಿಲ್ಲ ಎನ್ನುತ್ತಾರೆ. ಮೇಲ್ಮನವಿದಾರರು ಒಂದೇ ಊರಿನವರು ಎಂದರೆ ಸರಿ. ನಾವು ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿದ್ದರಿಂದ ದುಡಿಯಲು ಬೇರೆಡೆ ಹೋಗಿದ್ದರಿಂದ ನಮ್ಮ ವಕೀಲರಿಗೆ ಬೇಟಿಯಾಗಿ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸಲು ಆಗಿಲ್ಲ. ನಾವು ಬೇರೆಡೆ ದುಡಿಯಲು ಹೋದ ಬಗ್ಗೆ ದಾಖಲೆಯನ್ನು

ಹಾಜರು ಪಡಿಸಿಲ್ಲ. ದಿನಾಂಕಃ 30.11.2021 ರಂದು ಆದ ಆದೇಶದ ಧೃಡಿಕೃತ ನಕಲನ್ನು 21.12.2021 ರಂದು ತೆಗೆಸಿದ ಬಗ್ಗೆ ನಮ್ಮ ವಕೀಲರು ನಮಗೆ ತಿಳಿಸಿದ್ದರು ಎಂದರೆ ಸರಿ. ನಮ್ಮ ಗ್ರಾಮದ ಮುಖಂಡರಾದ ಈರಪ್ಪ ಹೊನಕೇರಿ, ಲಕ್ಷ್ಮಣ ಕೂರಗುಂದ, ಮಹದೇವಪ್ಪ ಬಣಕಾರವರು ಸದರಿ ದಾವೆಯನ್ನು ಮಾತನಾಡುವ ಮೂಲ ಬಗೆಹರಿಸೋಣ ಎಂದು ಹೇಳಿದ್ದರಿಂದ ಮೇಲ್ಮನವಿ ಸಲ್ಲಿಸಲು ತಡವಾಗಿರುತ್ತದೆ. ಸದರಿಯವರು ನಮ್ಮನ್ನು ಹಾಗೂ 1 ನೇ ಎದುರುದಾರರನ್ನು ಕರೆದು ಮಾತುಕತೆ ಮಾಡಲು ಪ್ರಯತ್ನಿಸಿದ್ದರು. ಆದರೆ 1 ನೇ ಎದುರುದಾರ ಸದರಿ ಮಾತುಕತೆಗೆ ಬಂದಿರಲಿಲ್ಲ. ಸದರಿ ಮೇಲಿನ ಮುಖಂಡರು 1 ನೇ ಎದುರುದಾರರನ್ನು ರಾಜೀ ಮಾತುಕತೆಗೆ ಬರ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು 6 ಎಕರೆ ಜಮೀನು ಹೊಂದಿದ್ದೇನೆ. 2020-21 ನೇ ಸಾಲಿನಲ್ಲಿ ಮಳೆಗಾಲ ಚೆನ್ನಾಗಿತ್ತು ಎಂದರೆ ಸರಿಯಲ್ಲ. ಸದರಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ ಡಿಕ್ರಿ ಆದನಂತರ ಸದರಿ ಆದೇಶವನ್ನು ಪ್ರಶ್ನಿಸಲು ನಮಗೆ ಯಾವುದೇ ತೊಂದರೆ ಇಲ್ಲದೇ ಇದ್ದರಿಂದ ನಾವು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿ ಸದರಿ ಆದೇಶವನ್ನು ಪ್ರಶ್ನಿಸಿರುತ್ತೇವೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.